ಗೊಂದಲ

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಈ ನಾಡಿನ ಮಕ್ಕಳ ಭವಿಷ್ಯದ ಜೊತೆಯಲ್ಲಿ ಇವರು ಚಿಲ್ಲಾಟವಾಡುತ್ತಿದ್ದಾರೆ.

ಗೊಂದಲ

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮತ್ತೆ ಸದನದ ಬಾವಿಯಲ್ಲಿ ಇರತಕ್ಕಂಥ ಮಾನ್ಯ ಸದಸ್ಯರೆಲ್ಲರೂ ಕೂಡ ತಮ್ಮ ಆಸನಗಳಿಗೆ ಹೋಗಬೇಕು. ಈಗ ಅನೇಕ ಸದಸ್ಯರಿಗೆ ಶೂನ್ಯ ವೇಳೆಯಲ್ಲಿ ವಿಷಯಗಳನ್ನು ಪ್ರಸ್ತಾವ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ. ಈಗಾಗಲೇ ತಾವೆಲ್ಲರೂ ಪ್ರತಿಭಟನೆ ಮಾಡಿರತಕ್ಕಂಥದು ಮುಗಿದಿದೆ. ಆದ್ದರಿಂದ ತಾವೆಲ್ಲವರು ದಯಮಾಡಿ ತಮ್ಮ ಸೀಟ್‌ಗೆ ಹೋಗಿ.

ಗೊಂದಲ

ಶ್ರೀ ಜಿ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಪ್ರಚಾರ ಗಿಟ್ಟಿಸಿಕೊಳ್ಳುವ ದೃಷ್ಟಿಯಿಂದ ಇವರು ಈ ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಟಿ.ವಿ. ಮತ್ತು ಪತ್ರಕರ್ತರನ್ನು ಬಂದ್ ಮಾಡಿದರೆ ಅವರು ತಮ್ಮಗಳ ಚೇರ್‌ಗೆ ಬರುತ್ತಾರೆ. ಇಷ್ಟು ಬಿಟ್ಟರೆ ಬೇರೇನೂ ಇಲ್ಲ.

ಗೊಂದಲ

ಅಧ್ಯಕ್ಷರು : ಈಗ ನಿಮ್ಮ ಪ್ರತಿಭಟನೆ ಮಾಡಿ ಆಯಿತು. ಆದ್ದರಿಂದ, ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಈಗ 15 ನಿಮಿಷಗಳ ಕಾಲ ಸದನವನ್ನು ಮುಂದೂಡುತ್ತೇನೆ.

(ಸದನವು ಸಂಜೆ 6 ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಸದನವು ಪುನಃ ರಾತ್ರಿ 8 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು) ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

11. ಅಧ್ಯಕ್ಷರ ಅಪ್ಪಣೆ ಮೇರೆಗೆ:

(1) ಮಂಗಳೂರು ಬಂದರಿಗೆ ಅದಿರು ಸಾಗಣೆ ಮಾಡುವಾಗ ಲಾರಿಗಳು ಬ್ರಹ್ಮಾವರ ಬಾರ್ಕೂರು ನಡುವಿನ ಬ್ರಿಡ್ಜ್‌ನ ಮೇಲೆ 20 ಟನ್ ಅದಿರು ಬದಲು 70 ಟನ್ ಸಾಗಿಸುವುದರಿಂದ ತೊಂದರೆಯಾಗುತ್ತಿರುವುದರ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರುವುದರಿಂದ ಒಂದು ವಿಷಯ ಪ್ರಸ್ತಾಪಿಸಬಯಸುತ್ತೇನೆ. ಮಂಗಳೂರು ಬಂದರಿಗೆ ಅದಿರು ಸಾಗಣೆ ಮಾಡುವ ಲಾರಿಗಳೇನಿವೆ, 20 ಟನ್‌ಗಳಷ್ಟು ಅದಿರು ಸಾಗಾಣಿಕೆ ಮಾಡಿಕೊಂಡು ಹೋಗುವ ಬದಲು 70 ಟನ್‌ಗಳಷ್ಟು ಅದಿರನ್ನು ಸಾಗಾಣಿಕೆ ಮಾಡುತ್ತಿರುವುದರಿಂದ ನಿನ್ನೆ ಸಾಯಂಕಾಲ ನನ್ನ ಕ್ಷೇತ್ರದ ಬ್ರಹ್ಮಾವರ– ಬಾರ್ಕೂರು ನಡುವಿದ್ದ ಬ್ರಿಡ್ಜ್‌ನ ಎರಡು span collapse ಆಯಿತು. ಗರ್ಡರ್ಸ್ ಎಲ್ಲಾ ಕಟ್ ಆಗಿ, ಅದೇ ರೀತಿ ರಾಷ್ಟ್ರೀಯ ಹೆದ್ದಾರಿಯಲ್ಲಿನ ಒಂದು ಬ್ರಿಡ್ಜ್ ಸಹ ಇದೇ ರೀತಿ ಹಾಳಾಗುತ್ತಿದೆ. ಈ ಬಗ್ಗೆ ಸ್ಥಳೀಯರೆಲ್ಲರೂ ಚಳವಳಿ ಮಾಡಬೇಕೆಂದಿದ್ದಾರೆ. ಅದಕ್ಕೋಸ್ಕರ, ಸರ್ಕಾರ ತಕ್ಷಣ ಈ ಬಗ್ಗೆ ಕ್ರಮ ಕೈಗೊಂಡು, ಒಂದು ಲಾರಿಯಲ್ಲಿ

ಎಷ್ಟು ಟನ್‌ಗಳ ಪ್ರಮಾಣದಲ್ಲಿ ಸಾಗಾಣಿಕೆ ಮಾಡಲು ಅವಕಾಶವಿದೆ ಮತ್ತು ಲಾರಿಯಲ್ಲಿ ಎಷ್ಟು ಟನ್‌ಗಳ ಪ್ರಮಾಣದಲ್ಲಿ ಸಾಗಾಣಿಕೆ ಮಾಡುತ್ತಿದ್ದಾರೆ ಎಂಬುದನ್ನು ತನಿಖೆ ಮಾಡಿಸಬೇಕು ಹಾಗೂ ಲಾರಿಯಲ್ಲಿ ಇಪ್ಪತ್ತು ಟನ್‌ಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸಾಗಾಣಿಕೆ ಮಾಡುತ್ತಿರುವುದನ್ನು ನಿಲ್ಲಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಈಗ ನ್ಯಾಷನಲ್ ಹೈವೇಯಲ್ಲಿ ಮಾಜುಕಲ್ ಬ್ರಿಡ್ಜ್ ಡ್ಯಾಮೇಜಾಗುತ್ತಿದೆ. ಅದಕ್ಕೋಸ್ಕರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಅವರಿಗೆ ಎಷ್ಟು ಪರ್ಮಿಷನ್ ಕೊಟ್ಟಿದ್ದೀರಿ ಅದಕ್ಕಿಂತ ಜಾಸ್ತಿ ಲೋಡ್ ಮಾಡಿಕೊಳ್ಳುವುದಕ್ಕೆ ಬಿಡಬಾರದು ಎಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಗಡೆಯವರು ಏನು ವಿಷಯ ರೈಜ್ ಮಾಡಿದ್ದಾರೆ ಅದು ಕೇವಲ ಅಲ್ಲಿ ಗಾಡಿ ಹೋಗುವುದು ನಮ್ಮ ಕಾರವಾರ ಕೋಸ್ಟಲ್ ಹೈವೇಯಿಂದ. ಕೆಲವು ಗಾಡಿಗಳು ವಯಾ ಮುಂದಗೋಡು ಸಿರಸಿ ಮೂಲಕ ಹೋಗುತ್ತವೆ. ಅವರು ಹೇಳಿದ ಹಾಗೆ ರಸ್ತೆ ಹಾಗೂ ಬ್ರಿಡ್ಜ್ ಡಿಟೀರಿಯೊರೇಟ್ ಆಗುತ್ತಿದೆ. It is likely that Sharavathi bridge may also collapse. Therefore, we request the Chief Minister to see that immediate instructions are given. ಎಷ್ಟು ಕೆಪಾಸಿಟಿ ಇದೆ ಅದಕ್ಕಿಂತ ಹೆಚ್ಚು ಟ್ರಕ್ಸ್ ಲೋಡ್ ಆಗಬಾರದು. So that, it will be safety for the people, the road and also the bridges.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಸಮಕ್ಷಮ ಈಗಾಗಲೇ ನನಗೆ ವಿಷಯವನ್ನು ತಿಳಿಸಿದ್ದಾರೆ. ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇದಕ್ಕೆ ಒಂದು ಆ್ಯಕ್ಟ್ ಪಾಸ್ ಮಾಡತಕ್ಕಂಥಾದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಏಕೆಂದರೆ ಎಷ್ಟು ಕೆಪಾಸಿಟಿ ಇದೆ ಅದಕ್ಕಿಂತ ಹೆಚ್ಚು ಎಂದರೆ 18 ರಿಂದ 20 ಟನ್ ತುಂಬಿಕೊಂಡು ಹೋಗುತ್ತಾರೆ. ಅದರಿಂದ ರಸ್ತೆಗೆ ಡ್ಯಾಮೇಜ್ ಆಗುತ್ತದೆ. ಅದಕ್ಕೆ ಒಂದು ಸೂಕ್ತವಾದ ಅಮೆಂಡ್‌ಮೆಂಟ್ ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಅವರಿಗೆ ಡಿಸ್ಟಿಕ್ಟ್ ಮೇಜರ್ ರೋಡ್‌ನಲ್ಲಿ ಅವಕಾಶ ಇರುವುದು 20 ಟನ್, ನ್ಯಾಷನಲ್ ಹೈವೇಯಲ್ಲಿ 40 ಟನ್ ತೆಗೆದುಕೊಂಡು ಹೋಗಬೇಕು. ಆದರೆ ಅವರು 70 ರಿಂದ 80 ಟನ್ ತೆಗೆದುಕೊಂಡು ಹೋಗುತ್ತಿದ್ದಾರೆ. ಆದುದರಿಂದ ಇದನ್ನು ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪೋಲೀಸ್ ಪರಿಷಾಧಿಕಾರಿಗಳಿಗೆ ಹೇಳಿ ಸ್ಟಾಪ್ ಮಾಡಿಸಿ.

ಶ್ರೀ ಧರ್ಮಸಿಂಗ್ : ಈಗ ತುರ್ತಾಗಿ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಅದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : 75 ಮೆಟ್ರಿಕ್ ಟನ್ ಹಾಕುತ್ತಾರೆ. ಅದು ಚಿಕ್ಕ ನಾಯಕನಹಳ್ಳಿಯಿಂದ ಸ್ಟಾರ್ಟ್ ಆಗುತ್ತದೆ.

(2) ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಶ್ರೀ ಎಸ್.ಎಲ್. ಧರಮೆಗೌಡ (ಬೇರೂರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ಮೂರ್ನಾಲ್ಕು ವರ್ಷಗಳಿಂದ ಬರಗಾಲ ಇದ್ದದ್ದರಿಂದ ಕಳೆದ ಸಾಲಿನಲ್ಲಿ ಸರ್ಕಾರ ರೈತರಿಂದ ಸಾಲ ವಸೂಲಾತಿ ಮಾಡತಕ್ಕಂಥಾದ್ದನ್ನು ಮುಂದೆ ಹಾಕಿದೆ. ಆ ಸಂದರ್ಭದಲ್ಲಿ ವಸೂಲಾತಿ ಆಗದೆ